7. ಸಾರ್ವಜನಿಕರಿಗೆ ಮಾರಲ್ಪಡುವ ಮದ್ಯಗಳು 0.180. 0.3000. 0.375. 0.600. 0.750 ಲೀ. ಹಾಗೂ 1,000 ಲೀ. ಪರಿಮಾಣದ ಮುಚ್ಚಿದ ಸೀಸೆಗಳಲ್ಲಿ ಬೀರು 0.325 ಮತ್ತು 0.650 ಲೀ. ಪರಿಮಾಣದ (capacity) ಮುಚ್ಚಿದ ಸೀಸೆಗಳಲ್ಲಿರತಕ್ಕದ್ದು. ಆದರೆ ಅಬಕಾರಿ ಆಯುಕ್ತರು ಬೇರೆ ಇನ್ನಾವುದೇ ಪ್ರಮಾಣದ ಮದ್ಯವನ್ನು ಮಾರಾಟ ಮಾಡಲು ಪರವಾನಿಗೆ ನೀಡಬಹುದಾಗಿದೆ. ಒಂದು ಬಾರಿಗೆ ಮಾರಲ್ಪಡುವ ಮದ್ಯ ಅಥವಾ ಬೀರು ಈ ಕೆಳಗೆ ತೋರಿಸಿರುವ ಪ್ರಮಾಣಕ್ಕಿಂತ ಹೆಚ್ಚಾಗಿರಬಾರದು.

1. ವಿದೇಶಿ ಮದ್ಯ	9.1 ಲೀ.ಗಳು
2. ಭಾರತೀಯ ಮದ್ಯ (ಸಾರಾಯಿ ಹೊರತು ಪಡಿಸಿ)	4.6 ಲೀ.ಗಳು
3. ಬೀರು	18.2 ಲೀ.ಗಳು

8. ಅಂಗಡಿಯಲ್ಲಿ ಮದ್ಯವನ್ನು ಕುಡಿಯಲು ನಿಷೇಧಿಸಿದೆ.

9. ಅಂಗಡಿ ತೆರೆಯುವ ಸಮಯ : ಬೆಳಿಗ್ಗೆ 10 ಗಂಟೆ, ಮುಚ್ಚುವ ಸಮಯಃ ರಾತ್ರಿ 10.30 ಗಂಟೆವರೆಗೆ.

ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿನ ನಾಗರೀಕರಿಗೆ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಧಿಕವಾಗಿರುವುದು.

35(48) -ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿನ ನಾಗರೀಕರಿಗೆ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯವರು

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳ ನಾಗರೀಕರಿಗೆ ಫ್ಲೋರೈಡ್ ರಹಿತ ಶುದ್ಧ ನೀರನ್ನು ಸರಬರಾಜು ಮಾಡಲು ಪರಗೋಡು ಹತ್ತಿರ ಚಿತ್ರಾವತಿ ನದಿಗೆ ಅಡ್ಡಲಾಗಿ ಹೊಸಕೆರೆಯನ್ನು ನಿರ್ಮಿಸಲು ಬೇಕಾಗುವ ಅಂದಾಜು ಪಟ್ಟಿಯನ್ನು ರೂ. 970.10 ಲಕ್ಷಗಳಿಗೆ ತಾಯಾರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಸದ್ಯಕ್ಕೆ ಬಾಗೇಪಲ್ಲಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಪ್ರತ್ಯೇಕವಾಗಿ ರೂ. 159.00 ಲಕ್ಷಗಳ ಅಂದಾಜಿಗೆ ಸರ್ಕಾರದಿಂದ ಅನುಮೋದನೆ ದೊರೆತಿದ್ದು ಕಾಮಗಾರಿಗಳು ಪ್ರಗತಿಯಲ್ಲಿದೆ.